# ಎನ್‌ಐಟಿಕೆ: ಟೆನಿಸ್ ಕೋರ್ಟ್ ಕೊಡುಗೆ



**ಸುರತ್ಕಲ್, ಮಾ. 29:** ಇಲ್ಲಿನ ಎನ್‌ಐಟಿಕೆಯಲ್ಲಿ ಪ್ರೊ| ಎ.ಎಸ್. ಅಡ್ಕೆ ಟೆನಿಸ್ ಅಕಾಡೆಮಿ ಕೋರ್ಟ್ ಉದ್ಘಾಟನೆ ಬುಧವಾರ ನಡೆಯಿತು.

1973ರ ಕೆಆರ್‌ಇಸಿ ವಿದ್ಯಾರ್ಥಿಗಳ ಬ್ಯಾಚ್ ಉದಾರವಾಗಿ ಕೊಡುಗೆ ನೀಡಿದೆ. ಈ ಟೆನಿಸ್ ಕೋರ್ಟ್ ಅನ್ನು ಅಂತಾರಾಷ್ಟ್ರೀಯ ಟೆನಿಸ್ ಫೆಡರೇಶನ್ (ಐಟಿಎಫ್) ಮಾನದಂಡಗಳ ಪ್ರಕಾರ ಸಿಂಥೆಟಿಕ್ ವಸ್ತುಗಳನ್ನು ಬಳಸಿ ನಿರ್ಮಿಸಲಾಗಿದೆ.

ಎನ್‌ಐಟಿಕೆ ಗೌರವ ನಿರ್ದೇಶಕ ಪ್ರೊ| ಬಿ. ರವಿ ಅಧ್ಯಕ್ಷತೆ ವಹಿಸಿ, ಹಳೆ ವಿದ್ಯಾರ್ಥಿಗಳ ಈ ಕೊಡುಗೆಯಿಂದ ವಿದ್ಯಾರ್ಥಿಗಳ ಕ್ರೀಡಾ ಪ್ರತಿಭೆಗೆ ಮತ್ತಷ್ಟು ಪ್ರೋತ್ಸಾಹ ಸಿಕ್ಕಿದಂತೆ ಆಗಿದೆ. ಇದರ ಸದುಪಯೋಗ ವಿದ್ಯಾರ್ಥಿಗಳು ಪಡೆಯಬೇಕು ಎಂದರು.

ಪ್ರೊ| ಉದಯಕುಮಾರ ಯರಗಟ್ಟಿ ಮುಖ್ಯ ಅತಿಥಿಯಾಗಿದ್ದರು. ಹಳೆಯ ವಿದ್ಯಾರ್ಥಿಗಳು ಮತ್ತು ಕಾರ್ಪೊರೇಟ್ ಸಂಬಂಧಗಳ ಡೀನ್ ಪ್ರೊ| ಶ್ರೀಕಾಂತ ಎಸ್. ರಾವ್, 1973ರ ಬ್ಯಾಚ್ ವಿದ್ಯಾರ್ಥಿಗಳು, ಬೋಧಕರು, ಸಿಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

Udayavani, Date:29/03/24, p. no - 02